ದಿನಾಂಕ:11.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ -

ನೀವು ನ್ಯಾಯಾಲಯಾಲಕ್ಕೆ ಸಲ್ಲಿಸಿರುವ ಕರಾರು ಪತ್ರವು ಜಮೀನಿನ ಖರೀದಿಗೆ ಸಂಬಂಧಪಟ್ಟಿದಲ್ಲ ಅದು ಸಾಲದ ಭದ್ರತೆಗಾಗಿ ಮಾಡಿಸಿಕೊಂಡ ಕರಾರು ಪತ್ರ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಸರ್ವೇ ನಂಬರ್ 119ರಲ್ಲಿ 20 ಗುಂಟೆ ಮಾಡಿಸಿಕೊಂಡಿರುತ್ತೇನೆ. ಕರಾರು ಪತ್ರ ಬರೆಸಿಕೊಂಡ ಸಮಯದಲ್ಲಿ ಸರ್ವೇ ನಂಬರ್ 119ರಲ್ಲಿ 20 ಗುಂಟೆ ಸ್ವತ್ತಿನಲ್ಲಿ ಪ್ರತಿವಾದಿಗಳು ಯಾರು ಸ್ವಾಧೀನದಲ್ಲಿ ಇರಲಿಲ್ಲ ಅವರ ದಾಯದಿಗಳ ಮಧ್ಯೆ ಸಿವಿಲ್ ದಾವೆ 83/1997ರಂತೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು ನಿಮ್ಮ ಬಳಿ ಯಾವುದೇ ಕ್ರಯದ ವಿಷಯವನ್ನು ಪ್ರಸ್ತಾಪ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರಮೋದ್ ಕುಮಾರ್ ಯಾರ ಮೂಲಕ ಪರಿಚಯವಾಯಿತು ಎಂದರೆ ನನ್ನ ಸ್ನೇಹಿತ ಮೂಲಕ. ಸರ್ವೇ ನಂಬರ್ 120ರಲ್ಲಿ ನಾನು ಖರೀದಿ ಮಾಡಿದ್ದೆ. ಸರ್ವೇ ನಂಬರ್ 120 ಪ್ರತಿವಾದಿಗಳಿಗೆ ಸೇರಿತ್ತು. ಸರ್ವೇ ನಂಬರ್ 120ರ ಸ್ವತ್ತಿನ ಕರಾರು ಪತ್ರ ಬರೆಸಿಕೊಳ್ಳುವ ಸಮಯದಲ್ಲಿ ಸರ್ವೇ ನಂಬರ್ 119ಕ್ಕೂ ಕರಾರು ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎರಡೂ ಸ್ವತ್ತಿಗೂ ಮಾತುಕತೆ ಮಾಡಿ ಒಂದು ಸ್ವತ್ತಿಗೆ ಮುಂಗಡ ಹಣವಾಗಿ 1 ಲಕ್ಷ ಹಣ ನೀವು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ಗುಂಟೆಗೆ ಎಷ್ಟು ರೂಪಾಯಿಗೆ ಖರೀದಿ ಮಾಡಿರುತ್ತೀರಿ ಎಂದರೆ ಗೊತ್ತಿಲ್ಲ. ಕ್ರಯದ ಯಾವುದೇ ವ್ಯವಹಾರ ಆಗಿದೇ ಇರುವ ಕಾರಣ ಮಾರುಕಟ್ಟೆ ಬೆಲೆಗಿಂತ ಕಡಿಮೆ ಮೊತ್ತಕ್ಕೆ ಬರೆಸಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ.

ದಾವಾ ಆಸ್ತಿಯ ಅಕ್ಕಪಕ್ಕ ಒಂದು ಗುಂಟೆಗೆ ಸರ್ಕಾರಿ ಮೌಲ್ಯ ಎಷ್ಟು ಇದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರ ಬರೆಸುವಾಗ ಪುಟ್ಟಣ್ಣ, ವಿವೇಕಾನಂದ, ವಿಜಯಲಕ್ಷ್ಮೀ ಬಂದಿರುತ್ತಾರೆ. ಶಾಂತರಾಜು ಎಂಬ ಪತ್ರ ಬರಹಗಾರರ ಬಳಿ ಕರಾರು ಪತ್ರ ಬರೆಸಿರುತ್ತೇನೆ. ಅವರ ಪರಿಚಯ ನನಗೆ ಇತ್ತು. ನೀವು ನೀಡಿರುವ ಹೇಳಿಕೆಯ ಪ್ರಕಾರ ಶಾಂತರಾಜು ಕರಾರು ಪತ್ರ ತಯಾರು ಮಾಡಿರುತ್ತಾರೆ ಎಂದರೆ ಸರಿ. ಕರಾರು ಪತ್ರವು ನಿಮ್ಮ ಒಕ್ಕಣೆಯ ಪ್ರಕಾರ ತಯಾರು ಮಾಡಿರುತ್ತಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಾಕ್ಷಿದಾರರು ಸಮಯ ಕೋರಿದ ಕಾರಣ ಮುಂದೂಡಲಾಯಿತು.
( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಕನಕಪುರ